# ಸುರತ್ಕಲ್ ಎನ್‌ಐಟಿಕೆ: 30 ನಿಮಿಷ 30 ಸೂರ್ಯ ನಮಸ್ಕಾರ ಸವಾಲು



**ಸುರತ್ಕಲ್, ಜೂ. 21:** ಸುರತ್ಕಲ್‌ನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ವತಿಯಿಂದ 10ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ರಾಧೇಶ್ ಮೋಹನ್ ದಾಸ್, ಅಧ್ಯಾಪಕರು, ಸಿಬಂದಿ, ವಿದ್ಯಾರ್ಥಿಗಳು ಎನ್ ಐಟಿಕೆ ಕ್ಯಾಂಪಸ್‌ನಲ್ಲಿ ವಿಶೇಷ ಯೋಗ ಪ್ರದರ್ಶನ ನಡೆಸಿದರು. ಅಂತಾರಾಷ್ಟ್ರೀಯ ಯೋಗ ದಿನ – 2024 ಆಚರಣೆಯ ಭಾಗವಾಗಿ, 30 ನಿಮಿಷಗಳ ಚಾಲೆಂಜ್‌ನಲ್ಲಿ '30 ಸೂರ್ಯ ನಮಸ್ಕಾರ' ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಪ್ರಭಾರ ನಿರ್ದೇಶಕ ಪ್ರೊ। ಲಕ್ಷ್ಮೀನಿಧಿ ಮಾತನಾಡಿ, ಯೋಗವು ಕೇವಲ ದೈಹಿಕ ವ್ಯಾಯಾಮಗಳನ್ನು ಮೀರಿದೆ- ಇದು ನಮ್ಮ ಪೂರ್ವಜರು ಜೀವನದ ವಿವಿಧ ಅಂಶಗಳಲ್ಲಿ ಅಳವಡಿಸಿಕೊಂಡ ಕಾಲಾತೀತ ಸಂಪ್ರದಾಯವಾಗಿದೆ ಎಂದರು.

Uadayavani, Date:22/06/24, p, no-04